## 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕಡೂರು

### ಸಿಸಿ. ನಂ.2943/2024

ಫಿರ್ಯಾದಿ ಃ ಸಖರಾಯಪಟ್ಟಣ ಪೊಲೀಸ್ ಠಾಣೆ

ವಿರುದ್ಧ

ಆರೋಪಿತರು ಃ

1. ಶಿವಕುಮಾರ ಬಿ.ಎಸ್. ಬಿನ್ ಸೋಮಣ್ಣ, 33 ವರ್ಷ, ಗಾರೆ ಕೆಲಸ, ವಾಸ ಃ ಕೋಟೆ, ಬಾಣಾವಾರ, ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ .
2. ಕುಮಾರನಾಯ್ಕ ಬಿನ್ ಲೇಟ್ ಕೃಷ್ಣನಾಯ್ಕ, ಸುಮಾರು 56 ವರ್ಷ, ವ್ಯವಸಾಯ, ವಾಸ ಃ ಅಗ್ರಹಾರ ತಾಂಡ್ಯ, ಕಡೂರು ತಾಲ್ಲೂಕು.
3. ಸಂತೋಷಕುಮಾರ ಬಿನ್ ಸೋಮಣ್ಣ, 31 ವರ್ಷ, ಪ್ರೈವೇಟ್ ಕಂಪನಿ ಕೆಲಸ, ವಾಸ ಃ ಕೋಟೆ, ಬಾಣಾವಾರ, ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ.

### ಆರೋಪಣೆ

**ಶ್ರೀಮತಿ ಸವಿತರಾಣಿ ಹೆಚ್.ವಿ., ಬಿ.ಎ.ಎಲ್., ಎಲ್.ಎಲ್.ಬಿ,** 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳು, ಕಡೂರು ಆದ ನಾನು ಈ ಮೂಲಕ ಕೆಳಕಂಡಂತೆ ಆಪಾದಿತರಾದ ನಿಮ್ಮ ಮೇಲೆ ಹೊರಿಸುವ ಆರೋಪಣೆ.

ದಿನಾಂಕ 21.05.2024 ರಂದು ಸಂಜೆ 7-15 ಗಂಟೆ ಸಮಯದಲ್ಲಿ ಸಖರಾಯಪಟ್ಟಣ ಪೊಲೀಸ್ ಠಾಣಾ ವ್ಯಾಪ್ತಿಯ ಅಗ್ರಹಾರ ತಾಂಡ್ಯ ಗೇಟ್ ಬಳಿ ಹಾದು ಹೋಗಿರುವ ಬಾಣಾವಾರ – ಸಖರಾಯಪಟ್ಟಣ ಟಾರು ರಸ್ತೆಯಲ್ಲಿ ಚಾಸಾ-1 ಅಭಿಲಾಷರವರು ಅನಾರೋಗ್ಯದ ಕಾರಣ ಆಸ್ಪತ್ರೆಗೆ ಹೋಗಲೆಂದು 2 ನೇ ಆರೋಪಿಯು ವಾಹನ ಸಂಖ್ಯೆಃ ಕೆಎ-18 ಇಎಫ್-0346 ನಂಬರಿನ ಬೈಕಿನ ಹಿಂಬದಿಯಲ್ಲಿ ಕುಳಿತು ಹೋಗುತ್ತಿರುವಾಗ, 2 ನೇ ಆರೋಪಿಯಾದ ನೀವು ಬೈಕನ್ನು ಅತಿ ವೇಗವಾಗಿ ಮತ್ತು ನಿರ್ಲಕ್ಷ್ಯತನದಿಂದ ಮುಖ್ಯ ರಸ್ತೆಯಲ್ಲಿ ಬರುವ ವಾಹನಗಳನ್ನು ನೋಡದೆ ಅಗ್ರಹಾರ ತಾಂಡ್ಯ ಗ್ರಾಮದ ರಸ್ತೆಯಿಂದ ಬಾಣಾವಾರ ಮುಖ್ಯ ರಸ್ತೆಗೆ ಬಂದಿದ್ದು, ಅದೇ ಸಮಯಕ್ಕೆ 1 ನೇ ಆರೋಪಿಯಾದ ನೀವು ಬಾಣಾವಾರದ ಕಡೆಯಿಂದ ಕೆಎ-01 ಇಕ್ಸ್ 9990 ಸಂಖ್ಯೆಯ ಬೈಕನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು 2 ನೇ ಆರೋಪಿಯು ಚಾಲನೆ ಮಾಡುತ್ತಿದ್ದ ಬೈಕಿಗೆ ಡಿಕ್ಕಿಪಡಿಸಿ ಅಪಘಾತವನ್ನುಂಟು ಮಾಡಿರುತ್ತೀರಿ. ಆದಕಾರಣ 1 ನೇ ಆರೋಪಿಯಾದ ನೀವು **ಭಾರತೀಯ**

**ದಂಡ ಸಂಹಿತೆ ಕಲಂ 279** ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

ಎರಡನೆಯದಾಗಿ, **ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ನೇ** ಆರೋಪಿಯಾದ ನೀವು ಬಾಣಾವಾರದ ಕಡೆಯಿಂದ ಕೆಎ-01 ಇಕ್ಸ್ 9990 ಸಂಖ್ಯೆಯ ಬೈಕನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು 2 ನೇ ಆರೋಪಿಯು ಚಾಲನೆ ಮಾಡುತ್ತಿದ್ದ ಚಾಸಾ-1 ರವರು ಪ್ರಯಾಣಿಸುತ್ತಿದ್ದ ಬೈಕಿಗೆ ಡಿಕ್ಕಿಪಡಿಸಿ ಅಪಘಾತವನ್ನುಂಟು ಮಾಡಿದ ಪರಿಣಾಮ, 2 ನೇ ಆರೋಪಿಯ ತಲೆಗೆ, ಮೂಗಿಗೆ ತೀವ್ರ ಸ್ವರೂಪದ ಗಾಯಗಳಾಗಲು ಕಾರಣರಾಗಿರುತ್ತೀರಿ. **ಆದಕಾರಣ, 1 ನೇ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ 338 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.**

ಕೊನೆಯದಾಗಿ, **ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 3 ನೇ** ಆರೋಪಿಯಾದ ನೀವು ಅಪಘಾತವಾದ ಸಮಯದಲ್ಲಿ ಸದರಿ ವಾಹನಕ್ಕೆ ವಿಮೆಯನ್ನು ಹೊಂದದಿರುವ ವಾಹನವನ್ನು 2 ನೇ ಆರೋಪಿಗೆ ಚಾಲನೆ ಮಾಡಲು ನೀಡಿರುತ್ತೀರಿ. ಅಂತೆಯೇ 2 ನೇ ಆರೋಪಿಯಾದ ನೀವು ವಿಮೆಯನ್ನು ಹೊಂದಿರದ ವಾಹನವನ್ನು ಚಾಲನೆ ಮಾಡಿರುತ್ತೀರಿ. **ಆದಕಾರಣ 2 ಮತ್ತು 3 ನೇ ಆರೋಪಿತರಾದ ನೀವು ಮೋಟಾರು ವಾಹನ ಕಾಯ್ದೆ 196 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.**

ಪ್ರಶ್ನೆ: 1- ನಿಮ್ಮ ಮೇಲಿನ ಆಪಾದನೆಯ ಸಾರವನ್ನು ಓದಿ ವಿವರಿಸಿ ಹೇಳಿದಾಗ ನಿಮಗೆ ಅರ್ಥವಾಯಿತೇ ?

ಉತ್ತರ:

ಪ್ರಶ್ನೆ: 2- ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ನಿಮ್ಮ ಪರ ಪ್ರತಿರಕ್ಷಣೆ ಇದೆಯೇ?

ಉತ್ತರ:

ಆದ್ದರಿಂದ ನೀವು ಮೇಲ್ಕಂಡ ದಂಡನೀಯ ಅಪರಾಧಗಳ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಒಳಪಡತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ: 14.02.2025

ಸಹಿ/-

**(ಶ್ರೀಮತಿ ಸವಿತರಾಣಿ ಹೆಚ್.ವಿ)**

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆಎಂಎಫ್‌ಸಿ., ಕಡೂರು.**